
ನೀಡುತ್ತ ಯಾವಾಗಲೂ ಶ್ರೀಹರಿಯನ್ನು ಕೀರ್ತಿಸಬೇಕು.' ನಾವು ಕೀರ್ತಿಯನ್ನು ಬಯಸದೆ ಹರಿಯನ್ನು ಕೀರ್ತಿಸಬೇಕು. ಹೆಸರು ಕೀರ್ತಿಯೆಂಬುದು ಒಂದು ಮತ್ತಿನಂತೆ. ಅದಿಲ್ಲದೇ ಇರುವಾಗ ವ್ಯಕ್ತಿಯು ನೆಮ್ಮದಿಯಿಂದ ಇರುತ್ತಾನೆ. ಅದು ಒಮ್ಮೆ ಸ್ವಲ್ಪ ಸಿಕ್ಕಿತು ಎಂದರೆ ಮತ್ತೇರುತ್ತದೆ. ಅನಂತರ ಎಷ್ಟು ಸಿಕ್ಕಿದರೂ ತೃಪ್ತಿಯೇ ಇಲ್ಲ! ಆಗ ವ್ಯಕ್ತಿಯು ತನ್ನ ನೆಮ್ಮದಿಯನ್ನು ಕಳೆದುಕೊಳ್ಳುತ್ತಾನೆ.

ಎರಡನೆಯ ಗುಣ ನಿರ್ಮೋಹ – ಸಂಸಾರದ ಆಕರ್ಷಣೆಯ ಮೋಹಕ್ಕೆ ನಾವು ವಶರಾಗಬಾರದು. ವಿಷಯಸುಖದ ಮೋಹ, ಬಂಧುಮಿತ್ರರ ಮೋಹ, ಹೆಸರು ಕೀರ್ತಿಯ ಮೋಹ, ಸಂಪ್ರದಾಯ ನಂಬಿಕೆಗಳ ಮೋಹ, ಮತೀಯ ಮೋಹ, ಸ್ಥಾನೈಶ್ವರ್ಯಗಳ ಮೋಹ, ವ್ಯಕ್ತಿತ್ವ ಮೋಹ – ಹೀಗೆ ಹಲವು ಬಗೆಯ, ಹಲವು ಸ್ತರದ ಮೋಹಗಳಿವೆ. ಭಗವದಾಕರ್ಷಣೆಯ ಬಲದಿಂದ ಈ ಮೋಹಗಳಿಂದ ಪಾರಾಗಬಹುದು. ಮೂರನೆಯ ಗುಣ ಸಂಗದೋಷವನ್ನು ಗೆಲ್ಲುವುದು. ಈ ಎಲ್ಲ ಗುಣಗಳೂ ಒಂದಕ್ಕೊಂದು ಪೂರಕ. ಶ್ರೀರಾಮಕೃಷ್ಣರು ಹೇಳುವಂತೆ, ಈ ಸಂಸಾರದಲ್ಲಿ ವಾಸಿಸುವುದೆಂದರೆ ಕಾಡಿಗೆಯ ಕೋಣೆಯಲ್ಲಿ ಇರುವಂತೆ. ನಾವು ಎಷ್ಟೇ ಎಚ್ಚರಿಕೆಯಿಂದಿದ್ದರೂ ಸ್ವಲ್ಪವಾದರೂ ಕಾಡಿಗೆ ಬಟ್ಟೆಗೆ ಅಂಟಿಕೊಳ್ಳುತ್ತದೆ. ಆದರೆ ನಿರ್ಲಿಪ್ತಭಾವದಿಂದ್ದರೆ, ತಾವರೆಯ ಎಲೆಯಂತಿದ್ದರೆ ಸಂಗದೋಷದಿಂದ ಪಾರಾಗಬಹುದು. ಈ ನಿರ್ಲಿಪ್ತತೆಯು ಬರಬೇಕಾದರೆ ಉನ್ನತ ಆಧ್ಯಾತ್ಮಿಕ ಆದರ್ಶದ ಕಡೆಗೆ ಮನಸ್ಸು ವಾಲಿರಬೇಕು. ಆದ್ದರಿಂದಲೇ ನಿತ್ಯವೂ ಅಧ್ಯಾತ್ಮದಲ್ಲಿಯೇ ಮನಸ್ಸುಳ್ಳವರಾಗಿರಬೇಕು (**ಅಧ್ಯಾತ್ಮನಿತ್ಯಾಃ**) ಎಂದು ಶ್ರೀಕೃಷ್ಣನು ಹೇಳುತ್ತಾನೆ. ಶ್ರೀರಾಮಕೃಷ್ಣರು ಹೇಳುವಂತೆ ಪರಪುರುಷನಲ್ಲಿ ಆಸಕ್ತಳಾದ ಮಹಿಳೆಯು ಮನೆಕೆಲಸಗಳನ್ನೆಲ್ಲ ಯಾಂತ್ರಿಕವಾಗಿ ನಿರ್ಲಿಪ್ತಳಾಗಿ ಮಾಡುತ್ತಾಳೆ, ಆಕೆಯ ಮನಸ್ಸೆಲ್ಲ ಆ ವ್ಯಕ್ತಿಯ ಮೇಲೆಯೇ ಇರುತ್ತದೆ. ಆಧ್ಯಾತ್ಮಿಕ ಸಾಧಕನು ಈ ರೀತಿ ನಿರ್ಲಿಪ್ತತೆಯಿಂದ ಇರಬೇಕೆಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಇಂತಹ ನಿರ್ಲಿಪ್ತತೆ ಬರಬೇಕಾದರೆ ಸಾಧಕನು ಆಸೆಗಳಿಂದ ದೂರವಾಗಿರಬೇಕು (**ವಿನಿವೃತ್ತಕಾಮಾಃ**). ಸುಖದುಃಖಗಳಿಗೆ ಆಸೆಗಳೇ ಕಾರಣವಾಗಿರುವುದರಿಂದ, ಆಸೆಗಳೇ ಇಲ್ಲದಿರುವಾಗ ಸುಖದುಃಖ ದ್ವಂದ್ವಗಳಿಂದಲೂ ಸಾಧಕನು ಮುಕ್ತನಾಗಿರುತ್ತಾನೆ (**ದ್ವಂದ್ವೈರ್ವಿಮುಕ್ತಾಃ ಸುಖದುಃಖಸಂಜ್ಞೈಃ**).

ಈ ಎಲ್ಲ ಗುಣಗಳು ಇದ್ದರೆ ಸಂಸಾರವೃಕ್ಷವನ್ನು ಕತ್ತರಿಸಿ ಮೋಕ್ಷ ಸಾಮ್ರಾಜ್ಯವನ್ನು ಪಡೆಯಬಹುದು.

## ಯುವಚೇತನ



**ಒಂ**ದು ಪ್ರಚಂಡ ಆಧ್ಯಾತ್ಮಿಕ ತರಂಗ ಬರುತ್ತಿದೆ. ಯಾರು ನೀಚರಾಗಿರುವರೋ ಅವರು ಉತ್ತಮರಾಗುತ್ತಾರೆ. ಯಾರು ಅಜ್ಞಾನಿಗಳೋ ಅವರು ಮಹಾಪಂಡಿತರ ಗುರುಗಳಾಗುತ್ತಾರೆ. ಉತ್ತಿಷ್ಠತ! ಜಾಗ್ರತ! ಪ್ರಾಪ್ಯ ವರಾನ್ನಿಬೋಧತ ! ಏಳಿ, ಜಾಗ್ರತರಾಗಿ, ಗುರಿ ಸೇರುವವರೆಗೂ ನಿಲ್ಲಬೇಡಿ. ವಿಕಾಸವೇ ಜೀವನ, ಸಂಕೋಚವೇ ಮರಣ. ತನ್ನ ಸ್ವಂತ ಸುಖವನ್ನು ನೋಡಿಕೊಳ್ಳುತ್ತ ಯಾರು ಸ್ವಾರ್ಥಪರರಾಗಿ, ಸೋಮಾರಿಗಳಾಗಿ ಕಾಲ ಕಳೆಯುತ್ತರುವರೋ ಅವರಿಗೆ ನರಕದಲ್ಲಿಯೂ ಸ್ಥಳವಿಲ್ಲ.

ಏಳಿ ಜಾಗ್ರತರಾಗಿ. ಆಧ್ಯಾತ್ಮಿಕ ಮಹಾತರಂಗ ಒಂದು ಬರುತ್ತಿದೆ. ಮುಂದೆ ನಡೆಯಿರಿ. ಸ್ತ್ರೀಯರು ಪುರುಷರು ಚಂಡಾಲನ ಪರಿಯಂತರ ಎಲ್ಲರೂ ಮುಂದೆ ಸಾಗಿ. ಅವರೆದುರಿಗೆ ಎಲ್ಲರೂ ಪವಿತ್ರರು. ಮುಂದೆ ! ಮುಂದೆ ! ನುಗ್ಗಿ ನಡೆಯಿರಿ. ಮುಂದೆ ! ಗೌರವ, ಕೀರ್ತಿ, ಭಕ್ತಿ, ಮುಕ್ತಿಗಳನ್ನು ಲಕ್ಷಿಸುವುದಕ್ಕೆ ಸಮಯವಿಲ್ಲ.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಭಾಗ ೪, ಪು.೨೨೨–೨೩)*

ಮುಂದುವರಿಯಿರಿ. ಒಂದು ಶೀಲವನ್ನು ಜೀವನದಲ್ಲಿ ರೂಢಿಸಬೇಕಾದರೆ ಅನೇಕ ವರ್ಷಗಳ ಹೋರಾಟ ಬೇಕು. ನಿರಾಶನಾಗದಿರು. ಸತ್ಯದ ಒಂದೇ ಒಂದು ನುಡಿ ಕೂಡ ನಾಶವಾಗುವುದಿಲ್ಲ. ಅನೇಕ ಶತಮಾನಗಳು ಅದು ಕಸದ ಗುಡ್ಡೆಯಲ್ಲಿ ಹುದುಗಿಕೊಂಡಿರಬಹುದು. ಆದರೆ ಇಂದೋ ನಾಳೆಯೋ ಎಂದಾದರೊಂದು ದಿನ ಅದು ಪ್ರಕಾಶಕ್ಕೆ ಬಂದೇ ಬರುವುದು. ಸತ್ಯಕ್ಕೆ ಚ್ಯುತಿಯಿಲ್ಲ, ಶೀಲಕ್ಕೆ ಚ್ಯುತಿಯಿಲ್ಲ, ಪಾವಿತ್ರ್ಯಕ್ಕೆ ಚ್ಯುತಿಯಿಲ್ಲ. ನನಗೆ ಒಬ್ಬ ವಿಶ್ವಸನೀಯ ಮನುಷ್ಯ ಸಾಕು, ಕೆಲಸಕ್ಕೆ ಬಾರದ ಒಂದು ಗುಂಪು ಬೇಕಾಗಿಲ್ಲ. ನನ್ನ ಮಗು! ಧೈರ್ಯವಾಗಿ ನಿಲ್ಲು. ನಿನಗೆ ಸಹಾಯ ಮಾಡುವುದಕ್ಕೆ ಬರುವ ಯಾರಿಗೂ ಕಾದು ಕುಳಿತುಕೊಳ್ಳಬೇಡ. ಎಲ್ಲ ಮಾನವರ ಸಹಾಯಕ್ಕಿಂತ ಮೇಲಲ್ಲವೆ ಭಗವಂತ? ಪವಿತ್ರನಾಗು. ದೇವರಲ್ಲಿ ಭಕ್ತಿ ಇಡು. ಯಾವಾಗಲೂ ಆತನನ್ನು ನಂಬು. ನೀನು ಸರಿಯಾದ ಹಾದಿಯಲ್ಲಿ ಹೋಗುವೆ. ನಿನ್ನನ್ನು ಯಾವುದೂ ಕದಲಿಸಲಾಗದು. *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಭಾಗ ೪, ಪು.೨೩೨)*

# ಸ್ವಾಮಿ ಅಖಂಡಾನಂದರ ಸ್ಮೃತಿಸಂಚಯ

ಬಂಗಾಳಿ ಮೂಲ: **ಸ್ವಾಮಿ ನಿರಾಮಯಾನಂದ** ಕನ್ನಡಕ್ಕೆ: **ಕುಮಾರಿ ಪಿ.ಉಷಾ**

ಭಾಗ ೧೧

**ಬಾ**ಬಾ ಹೇಳಿದರು, 'Imitation of Christ' is a great book. It helps a spiritual life of renunciation. We had that book in our first monastery. It's a very nice book.' *('ಕ್ರಿಸ್ತನ ಅನುಕರಣೆ' ಒಂದು ಶ್ರೇಷ್ಠ ಗ್ರಂಥ. ಅದು ತ್ಯಾಗಿಗಳ ಆಧ್ಯಾತ್ಮಿಕ ಜೀವನಕ್ಕೆ ಸಹಾಯಕ. ನಮ್ಮ ಮೊದಲನೆಯ ಮಠದಲ್ಲಿ ಆ ಗ್ರಂಥವಿತ್ತು. ಅದು ಬಹಳ ಒಳ್ಳೆಯ ಪುಸ್ತಕ.')* ತರುವಾಯ ಬಾಬಾ ಏನನ್ನೋ ಜ್ಞಾಪಿಸಿಕೊಂಡು ಫಿಲಿಪ್‌ನನ್ನು ತಮ್ಮ ಕೋಣೆಯೊಳಕ್ಕೆ ಕರೆದುಕೊಂಡು ಹೋಗಿ, ಮೋಂಬತ್ತಿಯ ಬೆಳಕಿನಲ್ಲಿ ಅವನನ್ನು ಚೆನ್ನಾಗಿ ನೋಡಿ, ಕೆಲವು ಪ್ರಶ್ನೆಗಳನ್ನು ಕೇಳಿದರು. ನಂತರ ಸಂತೋಷದಿಂದ ಇಬ್ಬರೂ ಹೊರಗೆ ಬಂದರು. ಫಿಲಿಪ್, ತಾವು ಹಿಂದೆ ಸ್ವಪ್ನದಲ್ಲಿ ಬಾಬಾರನ್ನು ನೋಡಿದ್ದಾಗಿ ಹೇಳಿದ.

ಈ ಘಟನೆಯ ಕೆಲವು ದಿನಗಳ ನಂತರ ಶ್ರೀ ಶ್ರೀ ಜಗದ್ಧಾತ್ರೀ ಪೂಜೆಯ ಶುಭದಿನದಂದು ಹೋಮ ಮಾಡಿ, ಬಾಬಾ ಫಿಲಿಪ್‌ಗೆ ಬ್ರಹ್ಮಚರ್ಯ ದೀಕ್ಷೆಯನ್ನಿತ್ತು 'ಪರಮಚೈತನ್ಯ' ಎಂದು ನಾಮಕರಣ ಮಾಡಿದರು. ಕ್ಷೌರ ಮಾಡಿಸಿಕೊಂಡು, ಬೋಳುತಲೆಯ ಫಿಲಿಪ್ ಶುಭ್ರ ಧೋತಿ – ಉತ್ತರೀಯವನ್ನು ಉಟ್ಟುಕೊಂಡು, ಬ್ರಹ್ಮಚಾರಿಯ ವೇಷದಲ್ಲಿ ವಿಶಿಷ್ಟವಾಗಿ ಕಾಣಿಸುತ್ತಿದ್ದ. ಈಗತಾನೆ ಹುಟ್ಟಿದ ಹಸುಗೂಸಿನ ಚಂಚಲತೆ ಹಾಗೂ ಆನಂದದಿಂದ ಕೂಡಿದ ಆತ ಆಶ್ರಮವನ್ನೆಲ್ಲ ಸುತ್ತಾಡುತ್ತಾ 'I am baba's youngest child' ಎಂದು ಮತ್ತೆ ಮತ್ತೆ ಹೇಳುತ್ತಿದ್ದ. ಸಂಜೆ ಅವನು ಠಾಕೂರರ ಮಂದಿರದ ಬಳಿ ಕೈಜೋಡಿಸಿ ಮೌನವಾಗಿ ಕುಳಿತಿರುತ್ತಿದ್ದ; ಕೆಲವೊಮ್ಮೆ ಯಾವುದಾದರೂ ಮರದ ಕೆಳಗೆ ಕುಳಿತು ಧ್ಯಾನ ಮಾಡುತ್ತಿದ್ದ. 'I must realize myself while in India. This is a great country. How you love so much, I wonder! So much love I have never found anywhere' ಎನ್ನುತ್ತಿದ್ದ. *('ಭಾರತದಲ್ಲಿರುವಾಗಲೇ ನಾನು ಆತ್ಮಜ್ಞಾನವನ್ನು ಪಡೆಯಬೇಕು. ಇದೊಂದು ಮಹಾನ್ ದೇಶ. ನೀವು ಎಷ್ಟೊಂದು ಪ್ರೀತಿಸುತ್ತೀರಿ, ಎಂಬುದನ್ನು ಕಂಡು ನನಗೆ ಆಶ್ಚರ್ಯವಾಗುತ್ತದೆ. ಇಂತಹ ಪ್ರೀತಿಯನ್ನು ನಾನೆಂದೂ, ಎಲ್ಲೂ ಪಡೆದಿಲ್ಲ.')*

ಫಿಲಿಪ್ ಬಳಿ ಸರಿಯಾದ ಹಾಸಿಗೆಯಿರಲಿಲ್ಲ. ಒಂದು ಕಂಬಳಿಯ ಮೇಲೆ ಉತ್ತರೀಯವನ್ನು ಹಾಸಿ, ತಲೆಗೆ ಕೈಯನ್ನಿಟ್ಟುಕೊಂಡು ಮಲಗುತ್ತಿದ್ದ. ಅವನು ಒಂದು ಉದ್ದವಾದ ಬಟ್ಟೆಯ ಉತ್ತರೀಯವನ್ನು ಹೊದ್ದುಕೊಳ್ಳುತ್ತಿದ್ದ. ಬೆಚ್ಚನೆಯ ಉಡುಪುಗಳ ಮಧ್ಯದಲ್ಲಿ ಕೋಟ್ ಮತ್ತು ಪ್ಯಾಂಟ್ ಇತ್ತು.

ಒಂದು ದಿನ ಬೆಳಿಗ್ಗೆ ಹತ್ತಿಯ ಶರ್ಟನ್ನು ಹಾಕಿಕೊಂಡು ಫಿಲಿಪ್ ಕೋಣೆಯಲ್ಲಿ ಮಂಚದ ಮೇಲೆ ಕೂತು ಧ್ಯಾನಮಾಡುತ್ತಿದ್ದ. ಹಿಂದಿನಿಂದ ಬಾಬಾ ಬಂದು ತಮ್ಮ ಹೊಸದಾದ ಬಿಳಿಯ ಉಣ್ಣೆಯ ಶಾಲನ್ನು ಫಿಲಿಪ್‌ಗೆ ಹೊದಿಸಿ ನಗತೊಡಗಿದರು. ಅವರ ತಲೆಗೂದಲು ಜಡೆಯಂತೆ ನೇತಾಡುತ್ತಿದ್ದು, ಬಾಬಾ ತುಂಬ ವಿಶಿಷ್ಟವಾಗಿ ಕಾಣಿಸುತ್ತಿದ್ದರು.

ಅಂದು ಸಂಜೆ ಫಿಲಿಪ್ ಮೃದುಸ್ವರದಲ್ಲಿ ಭಕ್ತನಿಗೆ ಹೇಳತೊಡಗಿದ: ''Do you know who baba is? Baba is Shiva, isn't it?'' ಭಕ್ತನು ವಿಸ್ಮಯಗೊಂಡು ಆನಂದದಿಂದ ಮೌನವಾಗಿ ಹೌದೆಂಬಂತೆ ಸ್ವಲ್ಪ ತಲೆಯನ್ನಾಡಿಸಿದ.

ಒಂದು ಸಂಜೆ ಬಾಬಾ ಹಿಂದಿನ ಕತೆಗಳನ್ನು ಹೇಳುತ್ತಾ ಸಾಧನೆ, ತ್ಯಾಗ, ವೈರಾಗ್ಯಗಳ ವಿಷಯವಾಗಿ ಅನೇಕ ವಿಚಾರಗಳನ್ನು ಹೇಳಿದರು: ''ಹರಿದ್ವಾರ, ಹೃಷೀಕೇಶಗಳಲ್ಲಿ ಮಧುಕರಿ ಭಿಕ್ಷೆ ಮಾಡುತ್ತಿದ್ದೆ. ಛತ್ರದಲ್ಲಿ ಗಂಟೆ ಹೊಡೆದು ಬಹಳ ಹೊತ್ತಾದ ನಂತರವೇ ಹೋಗುತ್ತಿದ್ದೆ. ಮಾಯಿ ಹೇಳುತ್ತಿದ್ದಳು, 'ಗಂಟೆ ಕೇಳಿಸಲಿಲ್ಲವೆ?' ನಾನೆನ್ನುತ್ತಿದ್ದೆ, 'ಗಂಟೆಯನ್ನು ಕೇಳಲೇ, ಧ್ಯಾನ ಮಾಡಲೇ ಮಾಯಿ?' ಆಗ ಆಕೆ, 'ಏನಿಲ್ಲ, ಈಗ ಸ್ವಲ್ಪ ಕಾಯಬೇಕಾಗುತ್ತದಷ್ಟೆ' ಎನ್ನುತ್ತಿದ್ದಳು.

''ನಾವು ಪರ್ವತದಲ್ಲಿದ್ದಾಗ ಎಲ್ಲವನ್ನೂ ಮರೆಯುತ್ತಿದ್ದೆವು. ಆದರೆ ಠಾಕೂರರು ನಮ್ಮನ್ನು ಈ ಸಂಸಾರದಲ್ಲಿ ತೊಡಗಿಸಿರುವಾಗ, ಸಂಸಾರಿಗಳೂ ಸೋಲುವಂತೆ ಕೆಲಸ ಮಾಡಬೇಕು. ಸಣ್ಣಪುಟ್ಟ ಕೆಲಸಗಳನ್ನೂ ಮಾಡಬೇಕು – ನೀನೇ ನೋಡುತ್ತಿರುವೆಯಲ್ಲ?''

ಯಾವುದೋ ಒಂದು ವಿಷಯಕ್ಕೆ ಒಬ್ಬ ಹೇಳಿದ, 'ನೆನಪಿರುವುದಿಲ್ಲ' ಎಂದು. ಬಾಬಾ ದನಿಯೇರಿಸಿ, ''ನನಗೂ ನೆನಪಿರುತ್ತಿರಲಿಲ್ಲ. ಟಿಬೆಟ್ಟಿನಲ್ಲಿ ಬಂಗಾಳಿ ಮರೆತುಬಿಟ್ಟಿದ್ದೆ. ನಂತರ ನಿಧಾನವಾಗಿ ನೆನಪಿಗೆ ಬರುತ್ತಿತ್ತು. ಹಾಗೆಯೇ ಜ್ಞಾಪಿಸಿಕೊಂಡರೆ ಜ್ಞಾಪಕವಿರುತ್ತದೆ.''

ವೈರಾಗ್ಯದ ವಿಷಯ ಬಂದಾಗ ಬಾಬಾ ಹೇಳಿದರು: '' **'ಯದಹರೇವ ವಿರಜೇತ್ ತದಹರೇವ ಪ್ರವ್ರಜೇತ್'** ಎಂದು ಬೃಹದಾರಣ್ಯಕ ಉಪನಿಷತ್‌ನಲ್ಲಿದೆ. ವೈರಾಗ್ಯ ತಳೆಯುವುದಕ್ಕೆ ದಿನ, ಕ್ಷಣಗಳಿಲ್ಲ. ವಯಸ್ಸನ್ನು ಯಾರೂ ಹಿಡಿದಿಟ್ಟುಕೊಳ್ಳಲಾರರು. **'ನಿರ್ಗಚ್ಛತಿ ಜಗಜ್ಜಾಲಾತ್ ಪಿಂಜರಾದಿವ ಕೇಸರೀ'** ಎಂದು *ವಿವೇಕ ಚೂಡಾಮಣಿ* ಯಲ್ಲಿ ಆಚಾರ್ಯ ಶಂಕರರು ಹೇಳುತ್ತಾರೆ. ಇವೆಲ್ಲ ವೈರಾಗ್ಯದ ಬಗ್ಗೆ ಹೇಳಿರುವ ಮಾತುಗಳು. ವೈರಾಗ್ಯವುಂಟಾದರೆ ಎಲ್ಲವನ್ನೂ ತ್ಯಜಿಸಿ ಹೊರಟುಹೋಗುತ್ತಾನೆ; ಯಾವ ದಿಕ್ಕಿನಲ್ಲೇ ಆಗಲಿ, ಪೂರ್ವ, ಪಶ್ಚಿಮ, ಉತ್ತರ – ಯಾವ ದಿಕ್ಕಿಗಾದರೂ ಸರಿ.

ಮತ್ತೆ ಹೀಗೆ ಹೇಳಿದೆ, **'...ಭಿಕ್ಷಾಚರ್ಯಮ್ ಚರಂತಿ'** ಭಿಕ್ಷೆಗೆ ನಿಯಮವಿದೆ, ಭಿಕ್ಷೆಗೆ ಯಾವಾಗೆಂದರೆ ಆವಾಗ ಹೋಗುವುದಲ್ಲ. ಮನೆಯಲ್ಲಿ ಎಲ್ಲರ ಊಟವೂ ಆದ ನಂತರ ಹೋಗಬೇಕು. ಅಗ್ನಿ ಯನ್ನಾರಿಸಿ, ಎಂಜಲು ಎತ್ತಿಯಾಗಿದೆ; ಆಗ ಎಷ್ಟು ಸಿಕ್ಕಿತೋ ಅಷ್ಟ ರಲ್ಲಿ ಸಂತುಷ್ಟನಾಗಬೇಕು.''

ಸಂಜೆಯ ನಂತರ ಬಾಬಾ ಬೂಕರ್ ವಾಷಿಂಗ್ಟನ್‌ನ ವಿಷಯ ಹೇಳುತ್ತಿದ್ದಾರೆ: ''ಅವನಿಗೆ ಆಂಗ್ಲ ತಂದೆ, ನೀಗ್ರೋ ತಾಯಿ. 'Up from slavery' ಓದಿದ್ದೀಯಾ? ಅವನ ಸೇವೆ ಹಾಗೂ ಶಿಕ್ಷಣದ ವಿಚಾರ: ಆತ ತನ್ನ ಕೈಯಿಂದಲೇ ಇಟ್ಟಿಗೆಗಳನ್ನು ತಯಾರಿಸಿ ಶಾಲೆಯ ಕಟ್ಟಡ ನಿರ್ಮಿಸಿದ. ಇಟ್ಟಿಗೆಯ ಆವಿಗೆ ಸುಡಲಾಗುತ್ತಿಲ್ಲ – ಮತ್ತೆ ಮತ್ತೆ ಸೋಲು. ಕೊನೆಗೆ ಎಲ್ಲವೂ ಆಗಿಬಿಟ್ಟಿತು. ಆತನೊಬ್ಬ mission (ಮಹಾನ್ ಉದ್ದೇಶ) ಇಟ್ಟುಕೊಂಡು ಜನ್ಮ ತಳೆದವನು. ಅವನನ್ನು ಏನು ತಾನೆ ತಡೆಯಬಲ್ಲುದು? ಅಥವಾ ಕುಗ್ಗಿಸಬಲ್ಲುದು? ಅವನು ನಿಶ್ಚಲ. ಶರತ್ ಮಹಾರಾಜರು ಆ ಪುಸ್ತಕವನ್ನು ನನಗೆ ಕೊಟ್ಟು, 'ತಮ್ಮಾ, ಮಹುಲಾದ ಗುಡಿಸಿಲಿನಲ್ಲಿ ನಿನ್ನ ಸೇವಾ ಕಾರ್ಯ ಹೇಗೆ ಆರಂಭವಾಯಿತೋ, ಇದೂ ಹಾಗೆಯೇ' ಎಂದರು.

''ಒಮ್ಮೆ ಪ್ರೆಸಿಡೆಂಟ್ ರೂಸ್‌ವೆಲ್ಟ್ ಜತೆ ಅವನು ಊಟ ಮಾಡು ತ್ತಿದ್ದ. ಅದಕ್ಕೆ ಎಲ್ಲರೂ ರೂಸ್‌ವೆಲ್ಟ್‌ರನ್ನು ಹೊಡೆಯಲು ಹೋದರು.

''ಇಲ್ಲಿ ಒಬ್ಬ ವಿದೇಶೀ ಮ್ಯಾಜಿಸ್ಟ್ರೇಟ್ ನನಗೆಂದ, 'ನೀವು ಮನುಷ್ಯರನ್ನು ಕೀಳಾಗಿ ನೋಡುತ್ತೀರಿ.' ನಾನು ಅವನ ಮುಖದ ಮೇಲೆ ಹೇಳಿದೆ, 'ನೀವು ಆ ರೀತಿ ಮಾಡುವುದಿಲ್ಲವೆ?' ಬಳಿಕ ಮೇಲಿನ ದೃಷ್ಟಾಂತವನ್ನು ಹೇಳಿದೆ. ಆಗ ಅವನು ಸುಮ್ಮನಾದ. ಕೊನೆಗೆಂದ, 'Christianity is not yet ripe in America' (ಕ್ರೈಸ್ತಧರ್ಮ ಅಮೇರಿಕಾದಲ್ಲಿ ಇನ್ನೂ ಪರಿಪಕ್ವವಾಗಿಲ್ಲ). ಏನೇ ಇರಲಿ, ಅಂದಿನಿಂದ ಆತ ನನ್ನ ಮಿತ್ರನಾದ. ನಾನು ನಿಜವನ್ನೇ ಹೇಳಿ ಬಿಡುತ್ತೇನಲ್ಲ! ಅದು ಆಂಗ್ಲರ ಸ್ವಭಾವ. ಬಂಗಾಳಿಗೇನಾದರೂ ನಿಜ ವನ್ನು ಹೇಳು, ಜೀವನ ಪರ್ಯಂತ ಅವನು ನಿನ್ನ ಶತ್ರುವಾಗುತ್ತಾನೆ.

* * *

''ಜಪಾನ್ ಅದೆಷ್ಟು ಸುಂದರ! 'ಚಿತ್ರವನ್ನು ರಚಿಸಿದಂತೆ' ಎಂದು ಸ್ವಾಮೀಜಿ ಬರೆಯುತ್ತಾರೆ. ಪಟ್ಟಣ, ಗ್ರಾಮಗಳಿಗೆ ವ್ಯತ್ಯಾಸ ವಿಲ್ಲ – ಎಲ್ಲ ಒಂದೇ ರೀತಿ. ರಸ್ತೆಗಳೆಲ್ಲ ನಾಜೂಕಾಗಿವೆ. ಅವುಗಳ ಇಬ್ಬದಿಯಲ್ಲೂ ಸುಂದರವಾದ ಪುಟ್ಟ ಪುಟ್ಟ ಮನೆಗಳು – ಸುತ್ತಲೂ ಹೂದೋಟಗಳು. ಹೂವಿನ ಟಬ್‌ನಲ್ಲಿ ಹೂಗಳು, ಹಣ್ಣಿನ ಮರ ಗಳಲ್ಲಿ ಹಣ್ಣುಗಳು.''

* * *

ಮತ್ತೆ ಬಾಬಾ ಹಿಂದಿನ ಪ್ರಸಂಗಕ್ಕೆ ಮರಳಿದರು. ''ನಮ್ಮ ರಾಜರುಗಳಿಗಿಂತ ಆಂಗ್ಲರ ಆಳ್ವಿಕೆಯೇ ಎಷ್ಟೋ ಮೇಲು. ಇವರ ಆಳ್ವಿಕೆಯನ್ನು ಕುರಿತು ಟೀಕೆ ಮಾಡಬಹುದು. ಎಷ್ಟೋ ಜನ ಮಾಡುತ್ತಾರೆ ಕೂಡ. ಆದರೆ ಅವರ ಬಗ್ಗೆ ಸ್ವಲ್ಪವೇನಾದರೂ ಹೇಳಿ ದರೆ ಗುಪ್ತಚರರು ಇರುತ್ತಾರೆ, ರಿಪೋರ್ಟ್ ಆಗಿಬಿಡುತ್ತದೆ. ಆಮೇಲೆ ವಿಚಾರಣೆ, ಚರ್ಚೆ ಏನೂ ಇಲ್ಲ. ಅಂಧಕೂಪದಲ್ಲಿ ಮೃತ್ಯುವಿನ ದಿನ ಗಳನ್ನೆಣಿಸುವುದು ಅಷ್ಟೆ. ಇದು ಈಗ ಹೆಚ್ಚಾಗಿದೆ. ಮೊದಲು ಇಷ್ಟೊಂದು ಇರಲಿಲ್ಲ. ಬ್ರಿಟಿಷ್ ರಿಜೆಂಟ್ ಇದ್ದೇ ಇದ್ದಾರೆ, ಅವರಿಗೆ ಎಲ್ಲ ಗೊತ್ತಿದೆ, ಅವರು ಎಲ್ಲವನ್ನೂ ನೋಡಿರುತ್ತಾರೆ.''

ಕೆಲವು ದಿನಗಳಿಂದ ಬಾಬಾರಿಗೆ ಕೆಲವರು ಸೇವಕರು ಹಳ್ಳಿಗಳಿಗೆ ಹೋಗಿ ಮಾಯಾಲಾಂದ್ರದ ಸಹಾಯದಿಂದ ಹಳ್ಳಿಗರಿಗೆ ವಿಷಯ ಗಳನ್ನು ತಿಳಿಸಿಕೊಡಬೇಕೆಂಬ ಇಚ್ಛೆಯಾಗಿದೆ. ಮೊದಲು ಹೋಗ ಬೇಕಾದುದು ಅಡವಾನಿ ಗ್ರಾಮದ ಶೋಕಸಂತಪ್ತನಾದ ಮುಸ ಲ್ಮಾನ ಭಕ್ತನ ಮನೆಗೆ. ಅದಕ್ಕಾಗಿ ಮಾಯಾಲಾಂದ್ರವನ್ನು ಸಿದ್ಧ ಗೊಳಿಸಲಾಗಿದೆ. ಅಮೆರಿಕನ್ ಬ್ರಹ್ಮಚಾರಿ ಇಂಜಿನಿಯರ್ ಎಲ್ಲ ವನ್ನೂ ತಯಾರು ಮಾಡಿದ್ದಾನೆ. ಇಂದು ಸಂಜೆ ಹಾಲ್‌ನ ಪಶ್ಚಿಮ ಗೋಡೆಯಲ್ಲಿ ಪರದೆಯನ್ನು ಹಾಕಲಾಗಿದೆ. ಬ್ರಹ್ಮಚಾರಿ ನಿರ್ಭಯ ಚೈತನ್ಯ ಸ್ಲೈಡನ್ನು ಹಾಕಿ ವಿವರಿಸುತ್ತಿದ್ದಾರೆ. ಹಾಲ್‌ನ ಪೂರ್ವಕ್ಕೆ ಬಾಬಾ ಬೆತ್ತದ ಕುರ್ಚಿಯಲ್ಲಿ ಕುಳಿತಿದ್ದಾರೆ, ಇಬ್ಬರು ಸೇವಕರು ಅವರ ಎರಡೂ ಕಾಲಿನ ಗಂಟುಗಳಿಗೆ ಔಷಧಿ ಹಚ್ಚಿ ಮಾಲಿಷ್ ಮಾಡುತ್ತಿದ್ದಾರೆ.

ಲಾಟೀನನ್ನು ಪರೀಕ್ಷಿಸಲು ಮೊದಲು ಸ್ವಾಮಿ ವಿವೇಕಾನಂದರ ಭಾವಚಿತ್ರವನ್ನು ಪರದೆಯ ಮೇಲೆ ತೋರಿಸಲಾಯಿತು. ಬಹಳ ಚೆನ್ನಾಗಿ ಫೋಕಸ್ ಆದಾಗ ಬಾಬಾ ಅತ್ಯಂತ ಸಂತೋಷದಿಂದ, ''ನೋಡಿದೆಯಾ, ಎಂಥ ಅದ್ಭುತ ಮೂರ್ತಿ!'' ಎಂದರು. ಬಾಬಾ ಅವರ ಧೃಡವಾದ ನಿಲುವು ಹಾಗೂ ತೇಜೋಮಯವಾದ ಮುಖ ಭಾವವನ್ನು ಗಮನಿಸಿದ ಎಲ್ಲರಿಗೂ ಅನ್ನಿಸಿತು, ಸ್ವಾಮೀಜಿಯವರ ಭಾವವನ್ನು ಅವರು ತುಂಬಿಕೊಂಡಿದ್ದರಿಂದಲೇ ಅವರಿಬ್ಬರ ಮುಖ ಮಂಡಲದಲ್ಲಿ ಅಷ್ಟೊಂದು ಹೋಲಿಕೆ ಕಂಡುಬರುತ್ತಿದೆ ಎಂದು.

ಸ್ವಲ್ಪ ಸಮಯದ ನಂತರ ಬಾಬಾ ಹೇಳಿದರು: ''ನೋಡು, ಸ್ವಾಮೀಜಿಯನ್ನು ಕಾಣುವುದು, ಠಾಕೂರರನ್ನು ಕಾಣುವುದು ಸುಲಭವಲ್ಲ. ಈ ಕಾಲದ ಜನರು ಸ್ವಾಮೀಜಿಯವರ ಮೂಲಕವೇ ಠಾಕೂರರನ್ನು ಅರಿತುಕೊಳ್ಳುವರು. ಜನ ಸ್ವಾಮೀಜಿಯವರ ವಿಚಾರ ಧಾರೆಯನ್ನೇ ಮೊದಲು ಸ್ವೀಕರಿಸುತ್ತಾರೆ, ಹೆಚ್ಚಾಗಿ ಸ್ವೀಕರಿಸುತ್ತಿದ್ದಾರೆ – ಇದನ್ನು ನೀನೇ ನೋಡುತ್ತಿರುವೆಯಲ್ಲ. ಸೇವಾಕಾರ್ಯಗಳು, ದೇಶಪ್ರೇಮ ಇವುಗಳ ಮೂಲಕವೇ ನೆಲ ಹಸನಾಗಿದೆ. ಅನಂತರವೇ spiritual (ಆಧ್ಯಾತ್ಮಿಕತೆ).'' ಅತ್ತ ಸ್ವಾಮೀಜಿಯ 'ಸ್ವದೇಶಮಂತ್ರ' ತೆರೆಯ ಮೇಲೆ ಕಾಣಿಸುತ್ತಿದೆ...ಓದಲಾಗುತ್ತಿದೆ – 'ಹೇ ಭಾರತವೆ, ಮರೆಯಬೇಡ...' ಇತ್ಯಾದಿ. ಓದು ಮುಗಿದ ಮೇಲೆ ಎಲ್ಲರೂ ಮೌನ, ಗಂಭೀರ ಭಾವವನ್ನು ತಳೆದರು. ನಂತರ ಬಾಬಾ ಹೇಳಿ ದರು, ''ಸ್ವಾಮೀಜಿಯವರು ಹೇಳಿದ 'ಸ್ವದೇಶಪ್ರೇಮ' ಸುಲಭ ವಲ್ಲ, ಇದು patriotism ಅಲ್ಲ; ಇದು ದೇಶಾತ್ಮಬೋಧೆ. ಜನರಿ ಗಿರುವುದು ದೇಹಾತ್ಮಬೋಧೆ. ಆದ್ದರಿಂದ ಅವರು ದೇಹದ ಸೇವೆ

ಯಲ್ಲಿಯೇ ಮುಳುಗಿದ್ದಾರೆ. ಇದು ದೇಶಾತ್ಮಬೋಧೆ – ಇಡೀ ದೇಶದ ಭೂತ, ಭವಿಷ್ಯತ್, ವರ್ತಮಾನದ ಚಿಂತೆ ಇಲ್ಲಿನದು. ಇದಕ್ಕೆ ಕೊನೆಯಲ್ಲ, ಇದರ ನಂತರ ವಿಶ್ವಾತ್ಮಬೋಧೆ ಅಂದರೆ ಎಲ್ಲರಿಗೋಸ್ಕರ ಚಿಂತಿಸುವ ಮನೋಭಾವ ಬರುತ್ತದೆ.''

ದೀರ್ಘಕಾಲದ ಮೌನ ಕಳೆದ ನಂತರ ಒಬ್ಬ ಕೇಳಿದ, ''ಇಷ್ಟು ದಿನಗಳಿಂದ ಎಷ್ಟೊಂದು ಕೆಲಸಗಳಾಗುತ್ತಿವೆ; ಜನಸಾಮಾನ್ಯರ ಉದ್ಧಾರವಾಗುತ್ತಿದೆಯೆ?'' ಬಾಬಾ ಹೇಳಿದರು, ''ಏನೇನು ಕೆಲಸ ಕಾರ್ಯಗಳು ಆಗಬೇಕಿತ್ತು ಎಂಬುದಕ್ಕೆ ಹೋಲಿಸಿದರೆ, ಏನು ಕೆಲಸ ವಾಗುತ್ತಿದೆ? ಈ ವಿಶಾಲ mass (ಜನಸಂಖ್ಯೆ) ಎಂಬುದು ಸ್ವಾಮೀಜಿ ಹೇಳುತ್ತಿದ್ದ sleeping leviathan (ನಿದ್ರೆಗೈದ ಜಲ ಚರ) ಎಂಬಂತೆ. ಇದನ್ನು ಎಚ್ಚರಗೊಳಿಸುವುದು ಅಪ್ರಯೋಜಕವೆ? ನಿಧಾನವಾಗಿ In spirit of sympathy and service (ಸಹಾನುಭೂತಿ–ಸೇವಾಭಾವದಿಂದ) ಅದನ್ನು ಸ್ಪರ್ಶಿಸಬೇಕು. ಆಗ ಅದು ಇದ್ದಕ್ಕಿದ್ದಂತೆಯೆ ಚೇತನಗೊಳ್ಳುತ್ತದೆ – ಆಗಾಗ ಹಾಗೆ mass response (ಜನಜಾಗೃತಿ) ಉಂಟಾಗುತ್ತಿದೆ. ಯಾರನ್ನು politician (ರಾಜಕಾರಣಿ) ಎಂದು ಕರೆಯುತ್ತಾರೋ ಅವರಿಗೆ ವಿಶೇಷವಾದ, ಯಾವುದೇ ನಿರ್ದಿಷ್ಟ ಬೆಲೆ ಎಂಬುದು ಇರುವುದಿಲ್ಲ. Mass awakening (ಜನಜಾಗೃತಿ) ಎಂಬುದು slow and sure (ನಿಧಾನ ಹಾಗೂ ನಿಶ್ಚಯವಾಗಿ) ನಡೆಯುತ್ತದೆ – ಜಪಾನ್, ರಷ್ಯಾ, ತುರ್ಕಿ ಹಾಗೂ ಚೀನಾ ದೇಶಗಳಲ್ಲಿ ಸನ್–ಯತ್–ಸೇನ್ ಹಾಗೂ ಕೆಮಾಲ್ ಪಾಷಾ ಮೊದಲಾದವರಿಂದ ಆದ ಹಾಗೆ. ಸ್ವಾಮೀಜಿಯವರ ಗುರಿ ಕೂಡ mass education (ಸಾರ್ವಜನಿಕ ಶಿಕ್ಷಣ). ಅದಕ್ಕೆ ಅವರು ಅಡಿಪಾಯ ಹಾಕಿ ಹೋಗಿದ್ದಾರೆ; ಅದು ಕ್ರಮೇಣ ಆಗುತ್ತದೆ. ಶವವನ್ನು ಸಚೇತನಗೊಳಿಸುವುದು ಅಷ್ಟು ಸುಲಭವೆ? ಸಾವಿರ ವರ್ಷಗಳ slaves (ಗುಲಾಮರು)?

''ಆದರೆ ನಾವೇ ಮೊದಲಿಗರು – ಗ್ರಾಮಗ್ರಾಮಗಳಲ್ಲಿ ಪ್ರತಿಯೊಂದು ಗುಡಿಸಲನ್ನೂ ಸುತ್ತಿದ್ದೇವೆ. ಸಂನ್ಯಾಸಿಗಳಾಗಿ, ಧರ್ಮದ ಮಾತುಗಳನ್ನಾಡದೆ, ಸಾಮಾನ್ಯ ಜ್ಞಾನದ ವಿಷಯಗಳನ್ನು ಹೇಳುತ್ತಾ ಹೋಗಿದ್ದೇವೆ. ನೀರನ್ನು ಶುದ್ಧೀಕರಿಸಿ ಕುಡಿಯಬೇಕು, ವಿನಾಶಕಾರಿ ರೋಗಗಳು ಇರುವಾಗ ಸಾಧ್ಯವಾದರೆ ನೀರನ್ನು ಕುದಿಸಬೇಕು ಇತ್ಯಾದಿ ಆರೋಗ್ಯ ರಕ್ಷಣೆಯ ಮಾತುಗಳು; ಆರ್ಥಿಕ ಸ್ಥಿತಿಯನ್ನು ಸ್ವಲ್ಪ ಮಟ್ಟಿಗಾದರೂ ಸುಧಾರಿಸುವ ಬಗೆ, ಊಟ–ವಸ್ತ್ರಗಳ ವ್ಯವಸ್ಥೆ ಮಾಡುವ ಬಗೆ, ಇತ್ಯಾದಿ. ಕಷ್ಟಕಾಲಕ್ಕಾಗಿ ಕಿಂಚಿತ್ತಾದರೂ ಉಳಿತಾಯ ಮಾಡಬೇಕು ಎಂಬುದಾಗಿಯೂ ಹೇಳಿದ್ದೇವೆ. ಆಶ್ರಮದಲ್ಲಿ ಎಷ್ಟು ಮಂದಿ ಕೋಸು ಬೆಳೆಯುವುದನ್ನು ಕಲಿತರು! ರೇಷ್ಮೆ ಸಾಕಣೆಗೆ ಮೊದಲ ಪ್ರೇರಣೆ ಕೊಟ್ಟವರು ನಾವೇ. ಆಶ್ರಮದಲ್ಲಿ ಎಷ್ಟು ದಿನ ಈ ಕೆಲಸ ನಡೆಯಿತು! ಕೆಲಸದವರು ಅವರ ಕೂಲಿಯಲ್ಲಿ ಉಳಿದದ್ದನ್ನು ಕಷ್ಟಕಾಲಕ್ಕೆಂದು ನನ್ನ ಬಳಿ ಜಮೆ ಮಾಡುತ್ತಿದ್ದರು. ಈಗಲೂ ಅನೇಕರ ಸಂಬಳದಲ್ಲಿ ಸ್ವಲ್ಪ ಜಮಾ ಇಟ್ಟುಕೊಳ್ಳುತ್ತೇನೆ – 'ಜಮಾ ಆಗಲಿ ಬಿಡು, ಕೆಲಸ ಮಾಡಲಾಗದ ದಿನ ತೆಗೆದುಕೊ' ಎನ್ನುತ್ತೇನೆ.

''ಶರತ್ ಚಟರ್ಜಿಯ ತಮ್ಮ ವೇದಾನಂದ ಅನೇಕ ದಿನ ಇಲ್ಲಿದ್ದ. ಶರತ್ ಬಾಬು ಒಮ್ಮೆ ನನ್ನನ್ನು ಭೇಟಿಯಾಗಲು ಬಲರಾಮ ಮಂದಿರಕ್ಕೆ ಬಂದರು. ಅವರು ಮಹಾರಾಜ್ (ಸ್ವಾಮಿ ಬ್ರಹ್ಮಾನಂದ) ರನ್ನು ಭೇಟಿಯಾಗಿ, ' ಸ್ವಾಮಿ ಅಖಂಡಾನಂದರು ಇಲ್ಲಿದ್ದಾರೆಯೆ?' ಎಂದು ಕೇಳಿದರು. ಬಳಿಕ ನನ್ನ ಬಳಿಗೆ ಬಂದು, 'ನಾನು ಸಾಧು–ಸಂನ್ಯಾಸಿಗಳನ್ನು ನೋಡಲು ಬಂದಿಲ್ಲ. ನೀವು ಮನುಷ್ಯರನ್ನು ಪ್ರೀತಿಸುತ್ತೀರೆಂದೂ, ಗುಡಿಸಲುಗಳಿಗೆ ಹೋಗುತ್ತೀರೆಂದೂ ಕೇಳಿದ್ದೇನೆ; ಆದ್ದರಿಂದ ತಮ್ಮನ್ನು ನೋಡಲು ಬಂದೆ. ನೀವು ಯಾವ ಭಾವದಿಂದ ಕೆಲಸ ಮಾಡುತ್ತೀರೋ, ಅದೇ ಭಾವದಿಂದ ನಾನು ಅಂಥ ಭಾವವನ್ನು ಹರಡಲು ಪುಸ್ತಕಗಳನ್ನು ಬರೆದಿದ್ದೇನೆ, ಕತೆಗಳನ್ನು ಬರೆದಿದ್ದೇನೆ' ಎಂದರು. ನಂತರ ಅವರ ಅನೇಕ ಪುಸ್ತಕಗಳನ್ನು ಕಳುಹಿಸಿದರು. ಕೆಲವು ನನಗೆ ಹಿಡಿಸಿದವು – 'ಪಲ್ಲೀಸಮಾಜ', 'ಪಂಡಿತ ಮಹಾಶಯ' ಇವು. ಮಿಕ್ಕವು 'ಮೂಲಂಗಿ ತೇಗಿದ ವಾಸನೆ'ಯಿಂದ (ಪ್ರಾಪಂಚಿಕತೆಯಿಂದ) ಕೂಡಿದವು.''

* * *

ಭಕ್ತನೊಬ್ಬನ ಪತ್ರಕ್ಕೆ ಉತ್ತರವಾಗಿ ಸ್ವಾಮಿ ಅಖಂಡಾನಂದರು, ''ಎಷ್ಟು ಸಾಧ್ಯವೋ ಅಷ್ಟು , ಯಾವಾಗ ಸಾಧ್ಯವೋ ಆಗ ಜಪ ಮಾಡು. ಅದಕ್ಕೆ ಸಮಯ–ಅಸಮಯ, ಸ್ಥಾನ–ಅಸ್ಥಾನವೆಂದಿಲ್ಲ. ಧ್ಯಾನ ಸಹಜವಾಗಿ ನಡೆಯುತ್ತಿದೆಯೆ?

''ಮನಸ್ಸು ಚಂಚಲವಾಗಿಯೇ ಇರುತ್ತದೆ. ಗೀತೆಯಲ್ಲಿ ಹೇಳಿದ ಮಾತು ಗೊತ್ತಿಲ್ಲವೆ? **'ಚಂಚಲಂ ಹಿ ಮನಃ ಕೃಷ್ಣ'** – ಅದಕ್ಕೆ ಉತ್ತರ: **'ಅಭ್ಯಾಸೇನ ತು ಕೌಂತೇಯ ವೈರಾಗ್ಯೇನ ಚ ಗೃಹ್ಯತೇ।'** ಅಭ್ಯಾಸ, ತೀವ್ರ ವೈರಾಗ್ಯಗಳಿಲ್ಲದೆ ಏನೂ ಸಾಧ್ಯವಿಲ್ಲ. ಅತ್ತಿತ್ತ ಹೋಗುವುದೇ ಮನಸ್ಸಿನ ಸ್ವಭಾವ. ಕಠೋಪನಿಷತ್ತಿನಲ್ಲಿಲ್ಲವೆ, **'ಪರಾಂಚಿ ಖಾನಿ ವ್ಯತೃಣತ್ ಸ್ವಯಂಭೂಃ'** ಅಂತ? ನಮ್ಮ ಇಂದ್ರಿಯಗಳೆಲ್ಲವೂ ಬಹಿರ್ಮುಖವಾಗಿವೆ, ಹೊರಗಿನದನ್ನು ಅವಲಂಬಿಸಿಯೇ ಅವುಗಳನ್ನು ಅಂತರ್ಮುಖವಾಗಿಸಿಕೊಳ್ಳಬೇಕು. ಅದಕ್ಕಾಗಿಯೇ ನೈವೇದ್ಯ, ಧೂಪ–ದೀಪ, ಹೂವು–ಹಣ್ಣುಗಳು ಹೀಗೆ ಎಷ್ಟೊಂದಿವೆ! ಮನಸ್ಸನ್ನು ಆತನ ಕಾರ್ಯಕ್ಕಾಗಿ, ಆತನ ಬಳಿ ಮನಸ್ಸನ್ನು engage ಮಾಡಲು (ನಿಯುಕ್ತಗೊಳಿಸಲು) ಇವೆಲ್ಲ ಅಗತ್ಯ. ಮನುಷ್ಯನ ಮನಸ್ಸು ಭೋಗವನ್ನು ಅನುಭವಿಸಲು ಇಚ್ಛಿಸುತ್ತದೆ. ಅದನ್ನು divineನ (ದಿವ್ಯತೆ) ಕಡೆಗೆ ಅನುಗೊಳಿಸಬೇಕು. ಇಷ್ಟದೇವತೆಯನ್ನು ಒಲಿಸಿಕೊಳ್ಳುವ ಆಸೆಯಾದರೆ ಎಂದೂ ಅನಿಷ್ಟಗಳಾಗುವುದಿಲ್ಲ, ಶುಭಸಂಸ್ಕಾರಗಳು ಆಗುತ್ತಿರುತ್ತವೆ.

''ನೀನೇಕೆ ಧ್ಯಾನ ಮಾಡುವುದಿಲ್ಲ? ಒಂದು ವಿಷಯದ ಮೇಲೆ ಧ್ಯಾನ ಮಾಡಬೇಕು. ಬಹಳ ಹೊತ್ತು ಆರತಿ ಮಾಡುವಂತೆ, ದೀಪದಾರತಿ ಮುಗಿದ ಮೇಲೆ ಕರ್ಪೂರದಾರತಿ ಮಾಡು, ಚಾಮರ

ಬೀಸು; ಮುಗಿಸಲು ಇಷ್ಟವೇ ಇಲ್ಲವೆಂಬಂತೆ ನಿರಂತರ ಮಾಡು. ಬಹಳ ಸಮಯದ ನಂತರ, ಇನ್ನುಮೇಲೆ ಅದು ಇಷ್ಟವಾಗದಿದ್ದರೆ ಬಗೆಬಗೆಯ ಹೂಗಳ ಪುಷ್ಪಾಂಜಲಿಯನ್ನು ಅರ್ಪಿಸುತ್ತಿರುವಂತೆ ಭಾವಿಸು. ಹಲವು ಬಣ್ಣಗಳ ಹಾರವನ್ನು ತೊಡಿಸಿ, ಬೇರೆ ಬೇರೆ ತಿನಿಸುಗಳನ್ನು ನೈವೇದ್ಯ ಮಾಡುತ್ತಿರುವೆ, ಹೀಗೆ ಅವಿಚ್ಛಿನ್ನ ಭಾವನೆಗಳ ಧಾರೆ – ಇದೇ ಧ್ಯಾನ.

''ಮನಸ್ಸಿನಲ್ಲಿ ಕೊಳೆ ಏಳುವುದು ಸಹಜವೆ, ಕೋಣೆಯೊಳಗೆ ಧೂಳೇಳುತ್ತಿರುವಂತೆ. ಗುಡಿಸಿ, ನೀರು ಸಿಂಪಡಿಸಿ ಕೋಣೆಯನ್ನು ಒರೆಸಿ ಆ ಧೂಳನ್ನು ತೆಗೆದು ಶುಚಿಗೊಳಿಸಬೇಕು. ಕೆಲವು ಭಾವನೆಗಳನ್ನು ಹಠದಿಂದ ಗುಡಿಸಿ, ಮನಸ್ಸಿನಿಂದ ಹೊರಹಾಕಬೇಕು. ಕೆಲವನ್ನು ಕಂಬನಿಗರೆದು, ಪ್ರಾರ್ಥನೆಯ ಸಹಾಯದಿಂದ ದೂರ ತಳ್ಳಬೇಕು, ನೀರು ಸಿಂಪಡಿಸಿದರೆ ಧೂಳೆಲ್ಲ ಕೆಳಗೆ ಬರುವಂತೆ. 'ಪ್ರಭು, ನನ್ನ ಮನಸ್ಸಿನಲ್ಲಿ ಇಂಥ ಭಾವನೆಗಳೇಕೆ ಬರುತ್ತವೆ? ಈ ಭಾವನೆಗಳಿದ್ದರೆ ನೀನು ಬರಲಾರೆ. ನನ್ನ ಮನಸ್ಸನ್ನು ಶುದ್ಧಗೊಳಿಸು, ಪವಿತ್ರಗೊಳಿಸು. ಬಾ, ದರ್ಶನ ನೀಡು' ಎಂದು ಕಣ್ಣೀರು ಸುರಿಸುತ್ತಾ ಹೇಳಬೇಕು. ಠಾಕೂರರು ನಮಗೆ ಈ ರೀತಿ ಕಲಿಸಿಕೊಟ್ಟಿದ್ದರು.

''ರಾತ್ರಿಹೊತ್ತು ಜಪಮಾಡಲು ಆಸೆಯಿದೆಯೆ? ನಿದ್ರೆ ಬರುವುದೆ? ನಿದ್ರೆ ಬಂದರೆ ಮಲಗು. ಹೆಚ್ಚು ಜಪಮಾಡಲು ಆಸೆಯಾದರೆ ಎದ್ದು ಕುಳಿತುಕೊ, ಬಿರುಸಾಗಿ ನಡೆದಾಡು, ಜಪಕ್ಕೆ ಕುಳಿತಾಗ ನಿದ್ದೆ ಬಂದರೆ ಓಡಾಡುತ್ತ ಜಪಮಾಡು.

''ರಾತ್ರಿ ಸ್ವಲ್ಪ ಕಡಿಮೆ ತಿನ್ನಬೇಕು. ಸರ್ವದಾ ಪ್ರಾರ್ಥನೆಯ ಭಾವವನ್ನಿಟ್ಟುಕೊಳ್ಳಬೇಕು. ಉಚ್ಚ ಚಿಂತನೆಯ ಧಾರೆ ಸದಾ ಇರಬೇಕು. 'ನಾನು ಈ ಜೀವನದಲ್ಲೇ ಭಗವಂತನನ್ನು ನೋಡಬೇಕು' ಎಂಬ ಭಾವ ಅಗತ್ಯವಾಗಿರಬೇಕು. ಭಗವಂತನನ್ನು ಎಲ್ಲ ಬಗೆಯಿಂದಲೂ ಕರೆದು ಬೇಸತ್ತು ಹೋದಾಗ, 'ಅಮ್ಮಾ, ನಿನ್ನನ್ನು ಹೇಗೆ ತಾನೆ ಕರೆಯಲಿ? ಒಂದು ಕರೆಯಲ್ಲಿಯೇ ನಿನ್ನ ದರ್ಶನವನ್ನು ಪಡೆಯಲಾಗುವಂಥ ಕರೆಯನ್ನು ಕರೆಯಲು ಕಲಿಸಮ್ಮಾ,' ಎಂದು ಕೇಳಿಕೊಳ್ಳಬೇಕು.''

ಮಾತಿನ ಮಧ್ಯದಲ್ಲಿ ಶಿವ ಭಂಗಿ ಸೇದುವ ವಿಚಾರ ಬಂತು. ಬಾಬಾ ಹೇಳಿದರು, ''ಶಿವ ಗಾಂಜಾ ತಿನ್ನುತ್ತಾನೆ, ಭಂಗಿ ಸೇದುತ್ತಾನೆ ಎಂದೆಲ್ಲ ಜನರು ಹೇಳುತ್ತಾರೆ. ನಿಜವಾಗಿಯೂ ಅವನು ಇವನ್ನೆಲ್ಲ ಸೇವಿಸುತ್ತಾನೆಯೆ? ಖಂಡಿತ ಇಲ್ಲ, ತಿಂದರೂ ಏನೀಗ? ಯಾರಿಗೆ ಸಮುದ್ರಮಥನದ ವಿಷವನ್ನು ಕುಡಿಯಲು ಸಾಧ್ಯವೋ, ಅವನಿಗೆ ಇವೆಲ್ಲಾ ಏನು ಮಹಾ? ಇವೆಲ್ಲ ಅತ್ಯಂತ ತುಚ್ಛ, ನಿಜ ಸಂಗತಿ ಏನು ಗೊತ್ತೆ? ಈ ವಿಷ ಕುಡಿದದ್ದನ್ನು, ದತ್ತೂರದ ಭಂಗಿ ಕುಡಿದದ್ದನ್ನು symbolise (ಸಂಕೇತವನ್ನಾಗಿ) ಮಾಡಿದ್ದಾರೆ.

* * *

ದೀಕ್ಷೆಯನ್ನು ಕುರಿತು ಬಾಬಾ ಹೇಳುತ್ತಿದ್ದಾರೆ: ''ಇನ್ನೇನು ದೀಕ್ಷೆ ಕೊಡಲಿ? ಯಾರಿಗೆ ಯಾರು ಬೇಕೋ ಅವರ ಹತ್ತಿರ ಕರೆದುಕೊಂಡು ಹೋಗಿ ಬಿಡುತ್ತೇನೆ. ಯಾರಿಗೆ ತಾಯಿ ಬೇಕೋ ಅವನಿಗೆ ತಾಯಿಯನ್ನು ತೋರಿಸುತ್ತೇನೆ. ತಂದೆ ಬೇಕಾದವರಿಗೆ ತಂದೆಯನ್ನು ಕೊಡುತ್ತೇನೆ. ಠಾಕೂರರೇ ತಂದೆ, ಅವರೇ ತಾಯಿ. ಇದಲ್ಲವೇ ದೀಕ್ಷೆ?''

ಅನಂತರ ತಮಾಷೆಗೆ, ''ಅರೆ, ನೀವೂ ದೀಕ್ಷೆ ಕೊಡಬಲ್ಲಿರಿ. ನೀನೂ ಮೂರು ಸಲ ಟಿಬೆಟ್ಟಿಗೆ ಹೋಗಿದ್ದೀಯಾ. ಅದೇರೀತಿ ಕೈಲಾಸ-ಕೇದಾರ ಮುಂತಾಗಿ ಇನ್ನೂ ಎಷ್ಟೋ ಸ್ಥಳಗಳಿಗೆ ಹೋಗಿದ್ದೀಯಾ'' ಎಂದರು.

* * *

ಇಲ್ಲಿ ಅನೇಕ ದಿನಗಳ ಘಟನೆಗಳನ್ನು ಒಂದೆಡೆ ಸಂಕ್ಷೇಪವಾಗಿ ಬರೆಯಲಾಗಿದೆ:

ದುರ್ಗಾಪೂಜೆಯ ಸಂದರ್ಭದಲ್ಲಿ ಪತ್ನೀವಿಯೋಗದಿಂದ ದುಃಖಿತರಾಗಿದ್ದ ಭಕ್ತರೊಬ್ಬರು ಮಕ್ಕಳ ಸಮೇತ ಆಶ್ರಮಕ್ಕೆ ಬಂದಿದ್ದರು. ಬಾಬಾ ಅವರೊಂದಿಗೆ ಆನಂದದಿಂದ ಸುಮಾರು ಎರಡು ತಿಂಗಳು ಕಳೆದರು. ಒಮ್ಮೊಮ್ಮೆ ಠಾಕೂರರ ಬಗ್ಗೆ ಮಾತುಕತೆ, ಒಮ್ಮೊಮ್ಮೆ ತಮ್ಮ ಸ್ಮೃತಿಕಥೆ, ಕೆಲವೊಮ್ಮೆ ತಮಾಷೆಯ ಮಾತುಗಳು, ಒಂದಾದ ಮೇಲೊಂದು ಉತ್ಸವಗಳು, ದುರ್ಗಾಪೂಜೆಯ ಬಳಿಕ ಕಾಳೀಪೂಜೆ, ಅನಂತರ ಜಗದ್ಧಾತ್ರೀ ಪೂಜೆ, ಇತ್ಯಾದಿ ಚಟುವಟಿಕೆಗಳಿಂದ ಆಶ್ರಮ ಮರ್ತ್ಯಲೋಕದಿಂದ ಆಚೆಗೆ, ಯಾವುದೋ ದೇವಭೂಮಿ ಅಥವ ಸಾಕ್ಷಾತ್ ಕೈಲಾಸವೆಂಬಂತೆ ಕಾಣಿಸುತ್ತಿತ್ತು .

ದುರ್ಗಾಪೂಜೆಯ ಕೆಲವು ದಿನ ಬಾಬಾ ಭಾವೋನ್ಮತ್ತರಾಗಿದ್ದರು, ವಿಶೇಷವಾಗಿ ದಶಮಿಯ ದಿನದಿಂದು. ಕಾಳೀಪೂಜೆ ರಾತ್ರಿಯೆಲ್ಲ ಜರುಗಿತು; ಮಾರನೆಯ ದಿನ ಬೆಳಗ್ಗೆ ಬಾಬಾ ಜಗದ್ಧಾತ್ರೀ ಪೂಜೆ ಮಾಡುವ ಇಚ್ಛೆಯನ್ನು ಪ್ರಕಟಪಡಿಸಿದರು. ಮೂರು ಪೂಜೆಗಳಿಗೆ ಮೂರು ಬಗೆಯ ಬಣ್ಣದ ಬಟ್ಟೆ ಅಗತ್ಯ. ಕುಮಾರಿ ಪೂಜೆಯನ್ನು ಸ್ವತಃ ಬಾಬಾ ಅವರೇ ಮಾಡುವರು. 'ಇಷ್ಟೊಂದು ಖರ್ಚು ಯಾರು ಕೊಡುತ್ತಾರೆ?' ಎಂದು ಕೇಳಿದಾಗ ಬಾಬಾ ಮೇಲೆ ಹೇಳಿದ ಅದೇ ಭಕ್ತನನ್ನು ತೋರಿಸಿದರು. ಪೂಜೆಯನ್ನು ಬಹಳ ಸುಂದರವಾಗಿ ಅಣಿಗೊಳಿಸಲಾಗಿತ್ತು . ಬಾಬಾ ಕೂಡ ಬಾಲಕನಂತೆ ಮಾತೃಪೂಜೆಯ ಆನಂದಸಾಗರದಲ್ಲಿ ನಲಿದಾಡಿದರು. ಪೂಜಾ ದಿನದಂದು ೧೦-೧೧ ಗಂಟೆಗೆ ಅದೇ ಭಕ್ತನ ೮ ವರ್ಷದ ಬಾಲಕಿಗೆ ಫಲಪುಷ್ಪಗಳನ್ನರ್ಪಿಸಿ ಬಾಬಾ ಕುಮಾರೀಪೂಜೆ ಮಾಡಿದರು.

ಇನ್ನೊಂದು ಉಲ್ಲೇಖನೀಯ ಘಟನೆ: ಇದೇ ಸಂದರ್ಭದಲ್ಲಿ ಸಂಜೆಯಾಗುತ್ತಿದ್ದಂತೆ ಬಾಬಾ ಒಂದೊಂದು ದಿನ ಒಂದೊಂದು ವೇಷ ಧರಿಸುತ್ತಿದ್ದರು. ಕೊರಳಿಗೆ ದೊಡ್ಡ ದೊಡ್ಡ ರುದ್ರಾಕ್ಷಿ, ಕೈಯಲ್ಲಿ ದಂಡ ಕಮಂಡಲು ಹಿಡಿದ ನೇಪಾಳೀ ಬಾಬಾ; ನೀಲಿ ನಿಲುವಂಗಿ ತೊಟ್ಟು ಕೈಯಲ್ಲಿ ಚಿಕ್ಕ ಹೂಜಿಯನ್ನಿಟ್ಟುಕೊಂಡ ಮುಸಲ್ಮಾನ ಫಕೀರ; ಬರ್ಮಾದಿಂದ ತಂದ ಪೋಷಾಕು ಹಾಗು ಛತ್ರಿಯೊಂದಿಗೆ ಬೌದ್ಧ ಪೂಜಾರಿ. ಒಂದು ದಿನ ಸೀರೆ (ಹಾಗೂ ಬಹುಶಃ ಬಳೆ) ಯನ್ನು ಉಟ್ಟ ತಾಯಿ ಯಶೋದೆ. ಎಲ್ಲವೂ ಎಲ್ಲರ (ವಿಶೇಷವಾಗಿ ತಾಯಿ